ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

10

ಶಾಖೆ / ವಿಷಯ : DEPARTMENT / SUBJECT: ಗೃಹ - ಸಿ.ಡಿ. ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 4/4/2021

# ಸಿಡಿ ಬಲೆಗೆ ಇನ್ನೊಬ್ಬ ಮಾಜಿ ಸಚಿವ?

## ಯುವತಿ ಜತೆ ಹಣಕಾಸು ವ್ಯವಹಾರ ನಡೆಸಿರುವ ಸಾಕ್ಷ್ಯ

ವಿಜಯವಾಣಿ ಸುದ್ದಿಜಾಲ ಬೆಂಗಳೂರು 4-4-21

ಮಾಜಿ ಸಚಿವರ ವಿರುದ್ಧದ ಅಶ್ಲೀಲ ಸಿಡಿ ಪ್ರಕರಣ ಮತ್ತೊಂದು ರೋಚಕ ತಿರುವು ಪಡೆದುಕೊಂಡಿದೆ. ಸಿಡಿ ಬಲೆಯಲ್ಲಿ ಚಿತ್ರದುರ್ಗ ಮೂಲದ ಮತ್ತೊಬ್ಬ ಮಾಜಿ ಸಚಿವರು ಸಿಲುಕಿರುವ ವಿಚಾರ ತನಿಖೆಯಲ್ಲಿ ಬೆಳಕಿಗೆ ಬಂದಿದ್ದು, ಅವರಿಗೆ ನೋಟಿಸ್ ಕೊಟ್ಟು ವಿಚಾರಣೆ ನಡೆಸಲು ಎಸ್ಐಟಿ ಸಿದ್ಧತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.



2008ರಲ್ಲಿ ಪಕ್ಷೇತರರಾಗಿ ಗೆದ್ದು, ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿ ನಂತರ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿರುವ ಮಾಜಿ ಸಚಿವರೊಬ್ಬರು ಅಶ್ಲೀಲ ವಿಡಿಯೋದಲ್ಲಿರುವ ಯುವತಿ ಜತೆ ಸಂಪರ್ಕ ಹೊಂದಿದ್ದಾರೆ. ಆಕೆಯ ಜತೆ ನಿರಂತರವಾಗಿ ಮೊಬೈಲ್ ಸಂಪರ್ಕ ಹೊಂದಿರುವುದಲ್ಲದೆ ಸಿಡಿ ಬಿಡುಗಡೆಗೂ ಮುನ್ನ ಯುವತಿ ಜತೆ ಲಕ್ಷಾಂತರ ರೂ. ವ್ಯವಹಾರ ನಡೆಸಿರುವುದಕ್ಕೆ ಎಸ್ಐಟಿಗೆ ಸಾಕ್ಷ್ಯ ಸಿಕ್ಕಿದೆ.

ಕರೊನಾ ಲಾಕ್‌ಡೌನ್ ಸಮಯದಲ್ಲಿ ಈ ಮಾಜಿ ಸಚಿವರು ಯುವತಿ ಜತೆ 35ಕ್ಕೂ ಅಧಿಕ ಬಾರಿ ಮೊಬೈಲ್‌ನಲ್ಲಿ ಮಾತುಕತೆ ನಡೆಸಿದ್ದಾರೆ.

ಪುಟ 3

### ಹನಿಟ್ರ್ಯಾಪ್ ಜಾಲವೇ?

ಸಿಡಿ ಪ್ರಕರಣದ ಎಲ್ಲ ಬೆಳವಣಿಗೆ ಗಮನಿಸಿದರೆ ಇದು ಹನಿಟ್ರ್ಯಾಪ್ ಜಾಲವೇ ಎಂಬ ಅನುಮಾನ ಎಸ್ಐಟಿ ಅಧಿಕಾರಿಗಳಿಗೆ ಶುರುವಾಗಿದೆ. ಯುವತಿಯನ್ನು ಮುಂದೆ ಬಿಟ್ಟು ರಾಜಕಾರಣಿಗಳು, ಉದ್ಯಮಿಗಳನ್ನು ಟ್ರ್ಯಾಪ್ ಮಾಡಿ ಹಣ ಸುಲಿಗೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಎಸ್ಐಟಿ ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸುತ್ತಿದೆ.

### ಯುವತಿ ಬರುವ ಮುನ್ನವೇ ಸುಳಿವು

ಅಜ್ಞಾತ ವಾಸದಲ್ಲಿದ್ದ ಯುವತಿ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಹಾಜರಾಗುವ ಮುನ್ನವೇ ಮಾಜಿ ಸಚಿವರು ಈಕೆ ಜತೆ ಹಣಕಾಸು ವ್ಯವಹಾರ ನಡೆಸಿರುವ ಬಗ್ಗೆ ಎಸ್ಐಟಿಗೆ ಸಾಕ್ಷ್ಯ ಸಿಕ್ಕಿತ್ತು ಎಂದು ಹೇಳಲಾಗುತ್ತಿದೆ.

# ಸಿಡಿ ಲೇಡಿ ಬಲೆಗೆ ಇನ್ನೊಬ್ಬ ಮಾಜಿ ಸಚಿವ?

ವಿ.ವಾ. 4-4-21

**ಮೊದಲನೇ ಪುಟದಿಂದ...**

ಆದರೆ, ಮಾಜಿ ಸಚಿವರಿಗೂ ಯುವತಿಗೂ ಯಾವ ರೀತಿಯ ಸಂಬಂಧವಿತ್ತು ಎಂಬ ವಿಚಾರ ಇನ್ನಷ್ಟೇ ಗೊತ್ತಾಗಬೇಕಿದೆ. ರಮೇಶ್ ಜಾರಕಿಹೊಳಿ ಸಿಡಿ ಬಿಡುಗಡೆಗೂ ಮುನ್ನ ಯುವತಿ ಮತ್ತು ಮಾಜಿ ಸಚಿವರ ಜತೆ ಮೊಬೈಲ್ ಸಂಭಾಷಣೆ ನಡೆದಿದೆ. ಅಲ್ಲದೇ ಹಣ ಕೂಡ ಪಡೆದುಕೊಂಡಿದ್ದಾಳೆ ಎನ್ನಲಾಗಿದೆ.

ಯುವತಿಯ ಗ್ಯಾಂಗ್ ತಮ್ಮ ವಿರುದ್ಧ ಷಡ್ಯಂತ್ರ ರೂಪಿಸಿ, ಬ್ಲ್ಯಾಕ್‌ಮೇಲ್ ಮಾಡಿದ್ದಾಗಿ ರಮೇಶ್ ಆರೋಪಿಸಿದ್ದರು. ಅದೇ ರೀತಿ ಪ್ರಕರಣದಲ್ಲಿ ಈಗ ಕೇಳಿಬಂದಿರುವ ಮಾಜಿ ಸಚಿವರನ್ನೂ ಯುವತಿಯ ಗ್ಯಾಂಗ್ ಟ್ರ್ಯಾಪ್ ಮಾಡಿ, ನಂತರ ಬ್ಲ್ಯಾಕ್‌ಮೇಲ್ ಮೂಲಕ ಲಕ್ಷಾಂತರ ರೂ. ಪಡೆದುಕೊಂಡಿದೆಯೇ ಎಂಬ ಅನುಮಾನವೂ ವ್ಯಕ್ತವಾಗಿದೆ. ಸಿಡಿ ಬಿಡುಗಡೆಗೆ ಮಾಜಿ ಸಚಿವರು ಫಂಡಿಂಗ್ ಮಾಡಿರಬಹುದೇ ಎಂಬ ಶಂಕೆಯೂ ಮೂಡಿದೆ ಎಂದು ಎಸ್ಐಟಿ ಮೂಲಗಳು ತಿಳಿಸಿವೆ. ಮೈಸೂರು ಭಾಗದ ಮಾಜಿ ಶಾಸಕ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಜತೆಗೂ ಸಿಡಿ ಲೇಡಿ ಹಣಕಾಸು ವ್ಯವಹಾರ ನಡೆಸಿರುವುದು ಕಂಡು ಬಂದಿದೆ ಎನ್ನಲಾಗಿದೆ. ಮಾಜಿ ಸಚಿವ ಸೇರಿ ಪ್ರಕರಣದಲ್ಲಿ ಕೇಳಿ ಬಂದಿರುವ ಎಲ್ಲರಿಗೂ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸುವ ಸಾಧ್ಯತೆಗಳಿವೆ. ಯುವತಿ ಬಳಿ 2 ಮೊಬೈಲ್ ಇದ್ದು, ಒಂದರಲ್ಲಿ ಈ ಮಾಜಿ ಸಚಿವರು ಸೇರಿ ಗಣ್ಯರ ಮೊಬೈಲ್ ನಂಬರ್ ಹಾಗೂ ಮತ್ತೊಂದರಲ್ಲಿ ಸ್ನೇಹಿತರು ಹಾಗೂ ಪರಿಚಿತರ ನಂಬರ್‌ಗಳಿರುವುದು ಗೊತ್ತಾಗಿದೆ.